ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳು.

1462 (2023)

ಶ್ರೀ ವಸಂತ ವಿ.ಸಾಲಿಯಾನ (ಕಾಪು): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರು, ಬೋಧಕರು, ಗುಮಾಸ್ತರು, ಜವಾನರುಗಳ ಒಟ್ಟು ಸಂಖ್ಯೆ ಎಷ್ಟು (ಹುದ್ದೆವಾರುವಿವರ ತಿಳಿಸುವುದು)

ಆ) ಈ ಖಾಲಿ ಹುದ್ದೆಗಳನ್ನು ಭರ್ತಿಮಾಡಲು ಸರಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ) ಉಪನ್ಯಾಸಕರು	602
ಪ್ರಥಮ ದರ್ಜೆ ಸಹಾಯಕರು	69
ಗ್ರಂಥಪಾಲಕರು	95
ದ್ವಿತೀಯದರ್ಜೆ ಸಹಾಯಕರು	21
ದ್ವಿ.ದ.ಸ. ಸಹಿತ ಬೆರಳಚ್ಚುಗಾರರು	31
ಗ್ರೂಪ್-ಡಿ	127

ಆ) ಉಪನ್ಯಾಸಕರ ಖಾಲಿ ಹುದ್ದೆಗಳನ್ನು ಭರ್ತಿಮಾಡಲು ಅಗತ್ಯಕ್ರಮ ತೆಗೆದುಕೊಳ್ಳಲಾಗುತ್ತಿದೆ. ಬೋಧಕೇತರ ಖಾಲಿ ಹುದ್ದೆಗಳನ್ನು ತುಂಬಲು ಆರ್ಥಿಕ ಮಿತವ್ಯಯವಿರುವುದರಿಂದ ಮಿತವ್ಯಯ ಸಡಿಲಿಸಿದ ನಂತರ ಕ್ರಮ ತೆಗೆದುಕೊಳ್ಳಲಾಗುವುದು.

ವಿಶ್ವಬ್ಯಾಂಕ್ ನೆರವಿನಡಿ ಕುಡಿಯುವ ನೀರಿನ ಯೋಜನೆ

1462 (2027)

ಶ್ರೀ ವಸಂತ ವಿ.ಸಾಲಿಯಾನ (ಕಾಪು): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು

ಪಂಚಾಯತ್ ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಖಾತೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?ೇ

1) ವಿಶ್ವಬ್ಯಾಂಕ್ ನೆರವಿನ ಯೋಜನೆಯಡಿ ರಾಜ್ಯದಲ್ಲಿ ಕಾರ್ಯಗತಗೊಳ್ಳುತ್ತಿರುವ ಕುಡಿಯುವ ನೀರಿನ ಯೋಜನೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

2) ಉಡುಪಿ ಜಿಲ್ಲೆಗೆ ಮಂಜೂರಾದ ಕಾಮಗಾರಿಗಳ ಸಂಖ್ಯೆ ಎಷ್ಟು? ಈ ಕಾಮಗಾರಿಗಳ ನಿರ್ಮಾಣ ಕಾರ್ಯ ಯಾವ ಹಂತದಲ್ಲಿದೆ?

3) ಈ ಕಾಮಗಾರಿಗಳ ನಿರ್ಮಾಣ ಕಾರ್ಯ ವಿಳಂಬವಾಗುತ್ತಿರುವುದು ನಿಜವೆ, ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಖಾತೆ ಸಚಿವರು):

1) ಒಟ್ಟು 1113

ಜಿಲ್ಲಾವಾರು ವಿವರ ಈ ಕೆಳಗಿನಂತೆ ಇದೆ.

ಕ್ರ ಸಂ	ಜಿಲ್ಲೆ	ಮಾದರಿ ಗ್ರಾಮ	ಹಂತ-1	ಹಂತ-2
1	ಬೆಂಗಳೂರು (ಗ್ರಾ)	1	23	43
2	ಶಿವಮೊಗ್ಗ	1	26	59
3	ಮೈಸೂರು	1	26	82
4	ಮಂಡ್ಯ	1	27	61
5	ದಕ್ಷಿಣ ಕನ್ನಡ	1	19	59
6	ಬೆಳಗಾಂ	1	24	78
7	ಬಳ್ಳಾರಿ	1	26	57
8	ಗುಲ್ಬರ್ಗಾ	2	26	72

9	ರಾಯಚೂರು	1	25	82
10	ಬೀದರ್	1	16	77
11	ತುಮಕೂರು	-	-	98
12	ಹಾಸನ	-	-	96
	ಒಟ್ಟು	11	238	864

2) ಒಟ್ಟು 24 (ನಿರ್ಮಾಣದ ಕಾರ್ಯದ ವಿವರ ಅನುಬಂಧ-ಅ ನಲ್ಲಿ ತಿಳಿಸಲಾಗಿದೆ)

3) ಮೊದಲನೆ ಹಂತದ ಕಾಮಗಾರಿಗಳು ವಿಳಂಬವಾಗಿವೆ. ಈ ಕಾಮಗಾರಿಗಳ ಗುತ್ತಿಗೆದಾರರ ನಿಧಾನಗತಿಯ ಪ್ರಗತಿಯಿಂದಾಗಿ ಕಾಮಗಾರಿ ಕುಂಠಿತವಾಗಿದೆ. ಇವರ ಮೇಲೆ ನಿಯಮಾನುಸಾರ ಶಿಸ್ತಿನ ಕ್ರಮ ತೆಗೆದುಕೊಂಡು ಬಾಕಿ ಕೆಲಸಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಎರಡನೇ ಹಂತದ ಕಾಮಗಾರಿಗಳ ಪ್ರಗತಿ ತೃಪ್ತಿಕರವಾಗಿದ್ದು ಟೆಂಡರ್ಸ್ ಅವಧಿಯೊಳಗೆ ಮುಗಿಸಲಾಗುವುದು.

ಅನುಬಂಧ-ಅ

ವಿಶ್ವಬ್ಯಾಂಕ್ ನೆರವಿನ ಯೋಜನೆಯಡಿಯಲ್ಲಿ ಉಡುಪಿ ಜಿಲ್ಲೆಯಲ್ಲಿನ ಕಾಮಗಾರಿಗಳ ನಿರ್ಮಾಣ ಕಾರ್ಯದ ವಿವರ

1	ಮಾದರಿ ಗ್ರಾಮ	ಹೊಂಬಾಡಿ ಮಂದಡಿ ಇಲ್ಲಿ ಕಾಮಗಾರಿಗಳು ಮುಗಿದಿದ್ದು, ಗ್ರಾಮೀಣ ನೀರು ಸರಬರಾಜು ಸಮಿತಿಗೆ ಹಸ್ತಾಂತರಿಸಲಾಗಿದೆ.
2	ಹಂತ- 1	3 ಗ್ರಾಮಗಳ ಅಂದರೆ 1) ವಾರಂಬಳ್ಳಿ 2) ಟಂಕನಡಿಯೂರ್ 3) ಮುಳೂರು ಗ್ರಾಮಗಳ ಕಾಮಗಾರಿಗಳು ಮುಗಿದಿದ್ದು, ಆಯಾ ಗ್ರಾಮದ ನೀರು ಸರಬರಾಜು ಸಮಿತಿಗೆ ಹಸ್ತಾಂತರಿಸಲಾಗಿದೆ. ಉಳಿದ 5 ಗ್ರಾಮಗಳ ಪ್ರಗತಿ ಈ ಕೆಳಕಂಡಂತಿದೆ. 1) ಶಿವಳ್ಳಿ- 4 ಮೇಲೆತ್ತರದ ತೊಟ್ಟಿಗಳನ್ನು ನಿರ್ಮಿಸಲಾಗಿದೆ. ರೈಸಿಂಗ್ ಮೇನ್ ಮತ್ತು ವಿತರಣಾ ಕೊಳವೆ ಭಾಗಶಃ ಅಳವಡಿಸಲಾಗಿದೆ. ಕೆಲವು ಪಂಪ್‌ಸೆಟ್ ಮತ್ತು ಸಾರ್ವಜನಿಕ ನಲ್ಲಿಗಳನ್ನು ಅಳವಡಿಸಬೇಕಾಗಿದೆ. 2) ಮುದಾರು- ಒಂದು ಭೂಮಟ್ಟದ ತೊಟ್ಟಿಯ ಕೆಲಸ ಮುಗಿದಿದೆ. ವಿತರಣಾ ಕೊಳವೆ ಅಳವಡಿಸಲಾಗಿದೆ. ಕೊಳವೆ ಬಾವಿಗಳಿಗೆ ವಿದ್ಯುತ್ ಪಂಪ್ ಅಳವಡಿಸಿ ಟ್ರಯಲ್‌ರನ್ ನಡೆಸಬೇಕಾಗಿದೆ. 3) ಕುಕ್ಕಂದೂರು: 2 ಮೇಲೆತ್ತರದ ತೊಟ್ಟಿಯ ಕೆಲಸ ಭಾಗಶಃ ಮುಗಿದಿದೆ. ವಿತರಣಾ ಕೊಳವೆ ಮತ್ತು ರೈಸಿಂಗ್‌ಮೇನ್ ಕೆಲಸ ಭಾಗಶಃ ಅಳವಡಿಸಲಾಗಿದೆ. ಸಾರ್ವಜನಿಕ ನಲ್ಲಿ ಮತ್ತು ಪಂಪ್‌ಸೆಟ್‌ಗಳನ್ನು ಅಳವಡಿಸಲಾಗಿದೆ. 4) ಕೆಡೂರು: ಒಂದು ಮೇಲೆತ್ತರದ ತೊಟ್ಟಿ

ನಿರ್ಮಿಸಲಾಗಿದೆ. ವಿತರಣಾ ಕೊಳವೆ, ರೈಸಿಂಗ್ ಮೇನ್ ಕೆಲಸ ಭಾಗಶಃ ಮುಗಿದರುತ್ತದೆ. ಪಂಪ್‌ಸೆಟ್ ಮತ್ತು ಸಾರ್ವಜನಿಕ ನಲ್ಲಿಗಳನ್ನು ಅಳವಡಿಸಲಾಗಿದೆ.

5) ಶಂಕರನಾರಾಯಣ: ಒಂದು 1.5 ಲಕ್ಷ ಲೀಟರ್ ಸಾಮರ್ಥ್ಯದ ಭೂಮಟ್ಟದ ತೊಟ್ಟಿಯ ಕೆಲಸ ಮುಗಿದಿದೆ. ಇನ್ನೊಂದು ಮೇಲ್ಮಟ್ಟದ ತೊಟ್ಟಿಯ ಕೆಲಸ ಭಾಗಶಃ ಮುಗಿದಿರುತ್ತದೆ. ಸಾರ್ವಜನಿಕ ನಲ್ಲಿ, ವಾಲ್ ಛೇಂಬರ್ ಮತ್ತು ಪಂಪ್‌ಸೆಟ್‌ಗಳ ಕೆಲಸ ಬಾಕಿ ಉಳಿದಿರುತ್ತದೆ.

ಹಂತ-2

ಕ್ರ ಸಂ.	ಗ್ರಾಮಗಳು	ತೊಟ್ಟಿಯ ಕೆಲಸ	ವಿತರಣ ಕೊಳವೆ	ರೈಸಿಂಗ್ ಪಂಪ್	ಇತರೆ
1.	ಅಲ್ಬಾಡಿ	ಮುಗಿದಿದೆ	ಮುಗಿದಿದೆ	ಮುಗಿದಿದೆ	ಪ್ರಗತಿಯಲ್ಲಿದೆ
2.	ಹೊಸೂರು	ಮುಗಿದಿದೆ	ಮುಗಿದಿದೆ	ಪ್ರಗತಿಯಲ್ಲಿದೆ	ಪ್ರಗತಿಯಲ್ಲಿದೆ
3.	ಹಕ್ಲಾಡಿ	ಮುಗಿದಿದೆ	ಪ್ರಗತಿಯಲ್ಲಿದೆ	ಪ್ರಗತಿಯಲ್ಲಿದೆ	ಪ್ರಗತಿಯಲ್ಲಿದೆ
4.	ಚಿತ್ತೂರು	ಮುಗಿದಿದೆ	ಮುಗಿದಿದೆ	ಪ್ರಗತಿಯಲ್ಲಿದೆ	ಪ್ರಗತಿಯಲ್ಲಿದೆ
5.	ಹಳ್ಳಿಹೊಳ	ಪ್ರಾರಂಭಿಸಿಲ್ಲ	ಪ್ರಾರಂಭಿಸಿಲ್ಲ	ಪ್ರಾರಂಭಿಸಿಲ್ಲ	ಪ್ರಾರಂಭಿಸಿಲ್ಲ
6.	ಕಂಟರ್‌ಗೂರು	ಪ್ರಗತಿಯಲ್ಲಿದೆ	ಪ್ರಗತಿಯಲ್ಲಿದೆ	ಪ್ರಾರಂಭಿಸಿಲ್ಲ	ಪ್ರಾರಂಭಿಸಿಲ್ಲ
7.	ಆರೂರು	ಪ್ರಗತಿಯಲ್ಲಿದೆ	ಪ್ರಗತಿಯಲ್ಲಿದೆ	ಪ್ರಾರಂಭಿಸಿಲ್ಲ	ಪ್ರಾರಂಭಿಸಿಲ್ಲ
8.	ಮಣರೂ	ಪ್ರಗತಿಯಲ್ಲಿದೆ	ಪ್ರಗತಿಯಲ್ಲಿದೆ	ಪ್ರಾರಂಭಿಸಿಲ್ಲ	ಪ್ರಾರಂಭಿಸಿಲ್ಲ
9.	52-ಹೆರೂರು	ಪ್ರಗತಿಯಲ್ಲಿದೆ	ಪ್ರಾರಂಭಿಸಿಲ್ಲ	ಪ್ರಾರಂಭಿಸಿಲ್ಲ	ಪ್ರಾರಂಭಿಸಿಲ್ಲ
10.	ಕಂಕ್ಯುಂಬೆ	ಪ್ರಗತಿಯಲ್ಲಿದೆ	ಪ್ರಾರಂಭಿಸಿಲ್ಲ	ಪ್ರಾರಂಭಿಸಿಲ್ಲ	ಪ್ರಾರಂಭಿಸಿಲ್ಲ
11.	ಅಂಪಾರು	ಪ್ರಗತಿಯಲ್ಲಿದೆ	ಪ್ರಾರಂಭಿಸಿಲ್ಲ	ಪ್ರಾರಂಭಿಸಿಲ್ಲ	ಪ್ರಾರಂಭಿಸಿಲ್ಲ
12.	ಬೇಳೂರು	ಪ್ರಗತಿಯಲ್ಲಿದೆ	ಪ್ರಾರಂಭಿಸಿಲ್ಲ	ಪ್ರಾರಂಭಿಸಿಲ್ಲ	ಪ್ರಾರಂಭಿಸಿಲ್ಲ
13.	ಬೆಬ್ರ	ಮುಗಿದಿದೆ	ಮುಗಿದಿದೆ	ಪ್ರಗತಿಯಲ್ಲಿದೆ	ಪ್ರಗತಿಯಲ್ಲಿದೆ
14.	ಮಾಳ	ಪ್ರಗತಿಯಲ್ಲಿದೆ	ಮುಗಿದಿದೆ	ಮುಗಿದಿದೆ	ಪ್ರಗತಿಯಲ್ಲಿದೆ
15.	ಕೌಡೂರು	ಮುಗಿದಿದೆ	ಪ್ರಗತಿಯಲ್ಲಿದೆ	ಪ್ರಗತಿಯಲ್ಲಿದೆ	ಪ್ರಗತಿಯಲ್ಲಿದೆ

ಜಿಲ್ಲಾ ಪಂಚಾಯತ್‌ಗಳಿಗೆ ಅಭಿವೃದ್ಧಿಪೂರಕ ಅನುದಾನ.